ಮುಂದಕ್ಕೆ ಹೋಗುತ್ತಿರಲಿಲ್ಲ. ಬೋರ್‌ವೆಲ್ ಹಿಡಿಕೆ ಮುಟ್ಟಿ ಒಮ್ಮೆ ಮೇಲೆ ಕೆಳಗೆ ಮಾಡಿದರೆ ಸಾಕು, ಬಳಬಳ ಅಂತ ಸಿಹಿಯಾದ ನೀರು ಬರುತ್ತಿತ್ತು. ಯಾಕೋ ಬಾಯಾರಿಕೆಯಾದಂತಾಗಿ ಬೋರ್‌ವೆಲ್ ಸಮೀಪಕ್ಕೆ ಹೋಗಿ ಹಿಡಿಕೆ ಹಿಡಿದುಕೊಂಡು ಮೇಲೆ ಕೆಳಗೆ ಮಾಡಿದ. ನೀರು ಬರಲಿಲ್ಲ. ಜೋರಾಗಿ ಹೊಡೆದ. ಆದರೂ ಬರಲಿಲ್ಲ. ನೀರಿನ ದಾಹ ಜಾಸ್ತಿ ಆಗಿ ಉಗುಳು ನುಂಗುತ್ತಾ ನಾಲಗೆಯಿಂದ ತುಟಿ ಸವರಿಕೊಂಡ. ಬೋರ್‌ವೆಲ್ ಎಷ್ಟು ಹೊಡೆದರೂ ನೀರು ಬರಲಿಲ್ಲ. ದಣಿವಾರಿಸಿಕೊಳ್ಳುತ್ತ ನಿಂತ. ಜೋರಾಗಿ ದೆವ್ವದ ಗಾಳಿ ರೆಮರೆಮನೆ ಬಂದು ಇದ್ದ ಬದ್ದ ಕಸಕಡ್ಡಿ ಕಾಗದ ದೂಳು ಬಟ್ಟೆ ಬರೆ ಎತ್ತಿಕೊಂಡು ಬಿಸಾಕುತ್ತ ಹೋಯಿತು. ರಾಮಚಂದ್ರನ ಕಣ್ಣಲ್ಲಿ ದೂಳುತುಂಬಿ ಕಣ್ಣು ತಿಕ್ಕಿಕೊಳ್ಳತೊಡಗಿದ. ಹಾಗೆ ಬಂದು ಹೀಗೆ ಸರ‍್ರನೆ ಹೋದ ದೆವ್ವದ ಗಾಳಿಗೆ ರಾಮಚಂದ್ರ ಅಲ್ಲಾಡಿಹೋದ. ಮಂಜುನಾಥನ ಮಾತು ಕೇಳಿ ನಾ ಮುಂಜಾನೆ ಬಂದಿದ್ದರೆ ಬೇಸಿತ್ತು ಅಂತ ಮನಸ್ಸಿಗೆ ಸಂಕಟಮಾಡಿಕೊಂಡು ಮುಂದೆ ಹೆಜ್ಜೆ ಇಟ್ಟ. ಏನೋ ಶಬ್ದವಾದಂತಾಗಿ ತಿರುಗಿ ನೋಡಿದ. ಬೋರ್‌ವೆಲ್‌ನಿಂದ ನೀರು ಬಳಬಳ ಹರಿಯತೊಡಗಿತು. ಅಯ್ಯೋ ಶಿವನೆ, ಇದೇನಪ್ಪ... ಇಷ್ಟು ಹೊತ್ತು ಹೊಡೆದರೂ ಬರಲಾರದ್ದು ಇವಾಗ ತನ್ನಿಂದ ತಾನೇ ಬರುತ್ತಿದೆ ಅಂತ ಬಗ್ಗಿ, ಒಂದೆರಡು ಗುಟುಕು ನೀರು ಗಂಟಲಲ್ಲಿ ಇಳಿಯುವ ಹೊತ್ತಿಗೆ, ಯಾರೋ ಎಳೆದು ದೂರ ಎಸೆದಂಗಾಗಿ, ಬೋರ್‌ವೆಲ್‌ನಿಂದ ಐದು ಆರು ಅಡಿ ದೂರ ಹೋಗಿ ಬಿದ್ದ. ಬಿದ್ದ ರಭಸಕ್ಕೆ ಮೊಣಕೈ ಮೊಣಕಾಲು ತರಚಿ ಗಾಯವಾಗಿ ರಕ್ತ ಒಸರಿತು. ಮುಟ್ಟಿದರೆ ನೋವಾದಂತಾಗಿ ಸಣ್ಣಗೆ 'ಹಾ!' ಅಂತ ಚೀರಿದ. ಇದು ದೆವ್ವಗಿವ್ವ ಏನಾದರೂ ಇರಬಹುದಾ? ತನ್ನ ಸತ್ತ ಅಜ್ಜಿಯೇ ದೆವ್ವಗಿವ್ವ ಆಗಿ ತನಗೆ ಈ ರೀತಿ ಮಾಡುತ್ತಿರಬಹುದಾ? ಇನ್ನೂ ಈಗಷ್ಟೇ ಸತ್ತಿರುವ ಅಜ್ಜಿ ಅಷ್ಟು ಬೇಗ ಹೇಗೆ ದೆವ್ವ ಆಗುತ್ತಾಳೆ? ದೊಡ್ಡಪ್ಪ ಇರಬಹುದಾ? ನಾನಂದ್ರೆ ಅಷ್ಟಕಷ್ಟೆ ಆತನಿಗೆ. ನನಗನ್ನಿಸುವ ಮಟ್ಟಿಗೆ ನಮ್ಮ ಅಜ್ಜಿಯ ಒಬ್ಬನೇ ಒಬ್ಬ ಮಗ ಪುಜಾರಿ ದುರುಗಪ್ಪ ಮಾವ ಇರಬಹುದೇನೋ? ದೇವರು ದಿಂಡಿರು ಅಂತ ನಮ್ಮ ಮಾವ ನಮ್ಮ ಊರಿಗೆ ಬಂದಾಗ ನಾ ಆತ ಇರುವಷ್ಟು ದಿನ ಆತನ ಕಣ್ಣಿಗೆ ಬೀಳದೆ ತಪ್ಪಿಸಿಕೊಂಡು ಓಡಾಡುತ್ತಿದ್ದೆ. ಕರ‍್ರಗೆ ಉದ್ದಕ್ಕೆ ಇದ್ದ ಆತ ಯಾವಾಗಲೂ ಗಂಟು ಕಟ್ಟದೆ ಕುತ್ತಿಗೆವರೆಗೂ ಇಳಿಬಿದ್ದ ಕೂದಲು, ಹಣೆಯಲ್ಲಿ ಮುತ್ತೈದೆ ಇಡುವಂಥ ಅಗಲವಾದ ಕುಂಕುಮ, ಕೊರಳಲ್ಲಿ ರುದ್ರಾಕ್ಷಿ ಮಾಲೆ, ಕರಿಬಂಡೆಯಂತಹ ಬರಿಮೈಗೆ ಅಂಗಿತೊಟ್ಟುಕೊಳ್ಳದೆ ಒಂದು ಕೆಂಪು ಲುಂಗಿಯಲ್ಲಿ ಓಡಾಡುತ್ತಿದ್ದ. ಇವತ್ತು ತನ್ನ ತಾಯಿ ಸತ್ತಿರುವುದು ಕಂಡು ಈ ದಾರಿಯಿಂದ ಹೊರಟಿರಬಹುದೇ? ರಾಮಚಂದ್ರ ಮೆಲ್ಲನೆ ಎದ್ದು ಏಳೆಂಟು ಸೀಳುನಾಯಿಗಳು ಹಿಂದೆ ಓಡಿಸಿಕೊಂಡು ತನ್ನ ಬೆನ್ನಟ್ಟಿರಬಹುದೆಂಬ ಭಯದಲ್ಲಿ ಓಡಾತೊಡಗಿದ. ಓಡಿ ಓಡಿ ಸೀಳುಗಾಲುವೆ ತಲುಪಿದ.

***

ರಾಮಚಂದ್ರನಿಗೆ ಇದ್ದ ಬದ್ದ ಏನೇನೋ ಸಂಗತಿಗಳು ನೆನಪಾಗಿ ಮತ್ತೆ ಭಯ ಶುರುವಾಯಿತು. ಶಾಂತವಾಗಿ ಹರಿಯುತ್ತಿದ್ದ ಸೀಳುಗಾಲುವೆಯಲ್ಲಿನ ನೀರು ಕಪ್ಪಗೆ ಸದ್ದು ಮಾಡದೆ ಲೈಟಿನ ಬೆಳಕಿಗೆ ಬರುವ ಹುಳ ಹುಪ್ಪಡಿಗಳನ್ನು ಗಬಕ್ಕನೆ ನುಂಗುವ ಹಲ್ಲಿಯಂತೆ ಕಂಡೂಕಾಣದಂತೆ ರಭಸವಾಗಿ ಹರಿಯುತ್ತಿತ್ತು. ಸೀಳುಗಾಲುವೆ ದಾಟಿ ಹೊರಟ. ಊರು ಕಣ್ಣುಮುಂದೆ ಕಾಣುತ್ತಿತ್ತು. ಆದರೆ, ರಾಮಚಂದ್ರನಿಗೆ ಹಳ್ಳದ ಪಕ್ಕದಲ್ಲಿರುವ ಸ್ಮಶಾನ ನೆನಪಾಗಿ, ಅಯ್ಯೋ ಶಿವನೆ... ಹೆಂಗಾನ ಮಾಡಿ ಈ ಹಳ್ಳ ದಾಟಿ ಹೋದರೆ ಸಾಕಪ್ಪ ಅಂತ ಅಂಜುತ್ತ ಅಂಜುತ್ತಾ ಹಳ್ಳದ ಹತ್ತಿರ ಬಂದವನು. ಕಣ್ಣುಮುಚ್ಚಿ ಗಟ್ಟಿಧೈರ್ಯ ಮಾಡಿ ದಡದಡ ಅಂತ ಹಳ್ಳ ದಾಟಿದವನೇ ಜೀವ ಕೈಯಲ್ಲಿ ಹಿಡಿದವನಂತೆ ಓಡತೊಡಗಿದ. ಊರು ಸಮೀಪ ಬರುತ್ತಲೇ ಹಿಂದಕ್ಕೆ ತಿರುಗದೆ ಮನೆ ಮುಟ್ಟಿದ. ರಾಮಚಂದ್ರನ ಅಕ್ಕ ಆಗ ಎರಡನೇ ಮಗುವಿನ ಹೆರಿಗೆಗೆ ಬಂದಿದ್ದಳು. ಬಾಣಂತಿ ಕೂಸಿಗೆ ಮೊಲೆಕುಡಿಸುತ್ತ ಅಳುತ್ತಿದ್ದಳು, ಚಂದ್ರವತಿ ರಾಮಚಂದ್ರನ ಅಜ್ಜಿಯ ಶವದ ಪಕ್ಕದಲ್ಲಿ ಬೀಸಣಿಗೆಯಿಂದ ಗಾಳಿ ಬೀಸುತ್ತಾ ಕುಳಿತಿದ್ದಳು.

ರಾಮಚಂದ್ರ ಬಂದವನೇ ಗಂಟಲು ಹರಿಯುವಂತೆ ಬೋರಾಡಿ ಅಳತೊಡಗಿದ. ಅವನನ್ನು ಯಾರೂ ಸಮಾಧಾನ ಮಾಡಲಿಲ್ಲ. ರಾಮಚಂದ್ರನ ಅಕ್ಕ